ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: 48 ಸುಪ್ರೀಂ ಕೋರ್ಟ್ ಮಾಹಿತಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ. ದಿನಾಂಕ : DATE 25/3/21

# ಸಿಜೆಐ ಸ್ಥಾನಕ್ಕೆ ನ್ಯಾಯಮೂರ್ತಿ ರಮಣ ಹೆಸರು ಶಿಫಾರಸು

**ಹೊಸದಿಲ್ಲಿ:** ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎಸ್.ಎ.ಬೊಬ್ಡೆ ತಮ್ಮ ಉತ್ತರಾಧಿಕಾರಿಯನ್ನಾಗಿ ಅತ್ಯಂತ ಹಿರಿಯ ನ್ಯಾಯಮೂರ್ತಿ ಎನ್.ವಿ.ರಮಣ ಅವರ ಹೆಸರನ್ನು ಶಿಫಾರಸು ಮಾಡಿದ್ದಾರೆ.



ಏಪ್ರಿಲ್ 23ರಂದು ನಿವೃತ್ತಿ ಹೊಂದಲಿರುವ ಸಿಜೆಐ ಬೊಬ್ಡೆ, 48ನೇ ಮುಖ್ಯ ನ್ಯಾಯಮೂರ್ತಿಯನ್ನಾಗಿ ನ್ಯಾ. ರಮಣ ಅವರನ್ನು ಪರಿಗಣಿಸುವಂತೆ ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ಸರ್ವೋಚ್ಚ ನ್ಯಾಯಾಲಯದ ಅತ್ಯಂತ ಹಿರಿಯ ನ್ಯಾಯಮೂರ್ತಿಯನ್ನು ಸಿಜೆಐ ಹುದ್ದೆಗೆ ಪರಿಗಣಿಸುವುದು ವಾಡಿಕೆ. ಅದೇ ರೀತಿ ಹಾಲಿ ಸಿಜೆ ತಮ್ಮ ನಿವೃತ್ತಿಗೆ ಒಂದು ತಿಂಗಳು ಮೊದಲು ಉತ್ತರಾಧಿಕಾರಿಯ ಹೆಸರನ್ನು ಸರಕಾರಕ್ಕೆ ಶಿಫಾರಸು ಮಾಡುವುದು ಕೂಡ ವಾಡಿಕೆಯಾಗಿ ನಡೆದು ಬಂದಿದೆ.

ಶಿಫಾರಸಿಗೆ ಸರಕಾರ ಸಮ್ಮತಿಸಿದರೆ ಏ.24ರಂದು ನ್ಯಾಯಮೂರ್ತಿ ಎನ್.ವಿ. ರಮಣ ಅವರು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಇವರ ಸೇವಾ ಅವಧಿ 2022, ಆಗಸ್ಟ್ 26ಕ್ಕೆ ಕೊನೆಗೊಳ್ಳುತ್ತದೆ.

**ಕೃಷಿ ಕುಟುಂಬದ ಹಿನ್ನೆಲೆ:** ಆಂಧ್ರಪ್ರದೇಶದ ಕೃಷ್ಣ ಜಿಲ್ಲೆಯ ಪೊನ್ನಾವರಂ ಗ್ರಾಮ, ಜಸ್ಟಿಸ್ ರಮಣ ಅವರ ಹುಟ್ಟೂರು. 1957, ಆಗಸ್ಟ್ 27ರಂದು ಕೃಷಿ ಕುಟುಂಬದಲ್ಲಿ ಜನಿಸಿದ ಅವರು, ಬಿಎಸ್ಸಿ ನಂತರ ಕಾನೂನು ಪದವಿ ಮುಗಿಸಿ 1983ರಲ್ಲಿ ವಕೀಲಿ ವೃತ್ತಿ ಪ್ರಾರಂಭಿಸಿದರು. ಅತ್ಯಂತ ಚುರುಕು ಮತಿಗಳಾದ ನ್ಯಾ.ರಮಣ ಅವರು, ದಿಟ್ಟ ತೀರ್ಪುಗಳಿಗೆ ಹೆಸರುವಾಸಿ.

## ಸೇವಾ ದಾಖಲೆ

- 2000, ಜೂನ್ 27ರಿಂದ-2013ರ ಸೆಪ್ಟೆಂಬರ್ 1ರವರೆಗೆ ಆಂಧ್ರಪ್ರದೇಶ ಹೈಕೋರ್ಟ್ ನ್ಯಾಯಮೂರ್ತಿ
- 2013, ಸೆಪ್ಟೆಂಬರ್ 2ರಂದು ದಿಲ್ಲಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ
- 2014, ಫೆಬ್ರವರಿ 17ರಂದು ಸುಪ್ರಿಂ ಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕ
- ಹಾಲಿ ಸಿಜೆಐ ಬೊಬ್ಡೆ ನಂತರ ಇರುವ ಹಿರಿಯ ನ್ಯಾಯಮೂರ್ತಿ ರಮಣ